ಹಾಲಿ ಕಾರ್ಯನ್ವಹಿಸುತ್ತಿರುವ ಮಧ್ಯಸಾರ ಉತ್ಪಾತನಾ ಪ್ರಾಥಮಿಕ ಡಿಸ್ಟಲರಿಗಳು ಯಾವುದೇ ಪ್ರತ್ಯೇಕ ಡಿಸ್ಟಿಲರಿ ಸನ್ನದನ್ನು ಪಡೆಯದೆ ಎಥನಾಲ್ ತಯಾರಿಸಬಹುದಾಗಿದೆ. ಸಕ್ಕರೆ ಕಾರ್ಖಾನೆಗಳು ಅಥವಾ ವ್ಯಕ್ತಿ: ಸಂಸ್ಥೆಗಳು ಎಥನಾಲ್ ತಯಾರಿಕೆಗೆ ಡಿಸ್ಟಲರಿ ಸನ್ನದು ಕೋರಿದ್ದಲ್ಲಿ ಕರ್ನಾಟಕ ಅಬಕಾರಿ ನಿಯಮಗಳ ಅನುಸಾರವಾಗಿ ಕ್ರಮ ಕೈಗೊಳ್ಳಲಾಗುವುದು. ಹಾಗೂ ಎಥನಾಲ್ ಅನ್ನು ಬಳಸುವ ತೈಲ ಸಂಸ್ಥೆಗಳ ಡಿಪೋಗಳಿಗೆ ಸರ್ಕಾರವು ಡಿ.ಎಲ್. 3 ಸನ್ನದುಗಳನ್ನು ಮಂಜೂರು ಮಾಡುವುದು.

ಇ) ರಾಜ್ಯದಲ್ಲಿನ 42 ಸಕ್ಕರೆ ಕಾರ್ಖಾನೆಗಳ ಪೈಕಿ 9 ಸಕ್ಕರೆ ಕಾರ್ಖಾನೆಗಳು ಈಗಾಗಲೇ ಪ್ರಾಥಮಿಕ ಡಿಸ್ಟಲರಿಗಳನ್ನು ಹೊಂದಿರುತ್ತದೆ ಸದರಿ 9 ಡಿಸ್ಟಲರಿಗಳ ಪೈಕಿ 3 ಡಿಸ್ಟಲರಿಗಳಿಗೆ ಎತನಾಲ್ ತಯಾರಿಸಲು ಅನುಮತಿ ನೀಡಲಾಗಿದ್ದು ಅವುಗಳ ಪೈಕಿ 2 ಡಿಸ್ಟಿಲರಿಗಳು ಎಥನಾಲ್ ಪೂರೈಕೆ ಪ್ರಾರಂಭಿಸಿವೆ. ಅಲ್ಲದೆ ಸಕ್ಕರೆ ಕಾರ್ಖಾನೆ ಹೊಂದಿಲ್ಲದ ಇನ್ನೆರಡು ಖಾಸಗಿ ಪ್ರಾಥಮಿಕ ಡಿಸ್ಟಲರಿಗಳು ಎಥನಾಲ್ ಉತ್ಪಾದನೆಗೆ ಅನುಮತಿ ಪಡೆದಿದ್ದು ಆ ಪೈಕಿ ಒಂದು ಡಿಸ್ಟಿಲರಿಯು ಈಗಾಗಲೇ ಎಥನಾಲನ್ನು ಪೂರೈಸುತ್ತಿದೆ. ಕೇಂದ್ರ ಸರ್ಕಾರವು ರಾಜ್ಯಕ್ಕೆ ನಿಗದಿಪಡಿಸಿದ ಎಥನಾಲ್ ಕೋಟಾವು ವಾರ್ಷಿಕ 3.40 ಲಕ್ಷ ಲೀಟರ್‌ಗಳಾಗಿದೆ. ಎಥನಾಲ್ ತಯಾರಿಸುತ್ತಿರುವ ರಾಜ್ಯದ ಮೂರು ಪ್ರಾಥಮಿಕ ಡಿಸ್ಟಲರಿಗಳೇ ಈ ಪ್ರಮಾಣವನ್ನು ಪೂರೈಸುವ ಸಾಮರ್ಥ್ಯ ಹೊಂದಿರುತ್ತವೆ. ಅದಾಗ್ಯೂ ಎಥನಾಲ್ ತಯಾರಿಸುವ ಡಿಸ್ಟಿಲರಿಗಳು ತೈಲ ಕಂಪನಿಗಳು ಎಥನಾಲ್ ಪೂರೈಕೆಗಾಗಿ ಕರೆಯುವ ಟೆಂಡರ್‌ನಲ್ಲಿ ಭಾಗವಹಿಸಿ ಯಶಸ್ವಿಯಾದರೆ ಮಾತ್ರ ಎಥನಾಲ್ ಅನ್ನು ಸರಬರಾಜು ಮಾಡಬಹುದೇ ಹೊರತು ಎಲ್ಲಾ ಎಥನಾಲ್ ತಯಾರು ಮಾಡುವ ಡಿಸ್ಟಿಲರಿಗಳು ಹಾಗೆಯೇ ಸರಬರಾಜು ಮಾಡಲು ಸಾಧ್ಯವಿಲ್ಲ.

ಈ) ಎಥನಾಲ್ ತಯಾರಿಕೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸರ್ಕಾರವು ಎಥನಾಲ್ ಮೇಲಿನ ಫೀ ಯನ್ನು ಲೀಟರ್ ಒಂದಕ್ಕೆ ರೂ. 2–ಕ್ಕೆ ನಿಗಧಿಪಡಿಸಿದೆ. ಬೇರೆ ಉದ್ದೇಶಗಳಿಗೆ ನೀಡುವ ಮಧ್ಯಸಾರದ ಮೇಲಿನ ಫೀ ಲೀಟರ್ ಒಂದಕ್ಕೆ 6.50 ಆಗಿರುತ್ತದೆ. ಎಥನಾಲ್ ವ್ಯವಹಾರಕ್ಕೆ ಸಂಬಂಧಿಸಿದಂತೆ ಇಲಾಖಾ ಕಾರ್ಯವಿಧಾನಗಳನ್ನು ಸರಳಗೊಳಿಸಿರುತ್ತದೆ. ಎಥನಾಲ್ ಪಡೆದು ಉಪಯೋಗಿಸುವ ನಿಟ್ಟಿನಲ್ಲಿ ತೈಲ ಸಂಸ್ಥೆಗಳಿಗೆ ವಾರ್ಷಿಕ ರೂ. 250/–ರಂತೆ ಶುಲ್ಕ ವಿಧಿಸಿ ಡಿ.ಎಲ್.3 ಸನ್ನದನ್ನು ವಿಳಂಬವಿಲ್ಲದೆ ನೀಡಲಾಗುತ್ತಿದೆ. ಎಥನಾಲ್ ತಯಾರಿಕೆಗೆ ಪ್ರತ್ಯೇಕ ಸನ್ನದಿಗೆ ಬದಲು ಪ್ರಾಥಮಿಕ ಡಿಸ್ಟಿಲರಿ ಸನ್ನದಿನಡಿಯಲ್ಲಿಯೇ ಅನುವು ಮಾಡಿಕೊಡಲಾಗಿದೆ ಹಾಗೂ ಅಂತಹ ಡಿಸ್ಟಿಲರಿಗಳ ಮಧ್ಯಸಾರ ಉತ್ಪಾದನಾ ಸಾಮರ್ಥ್ಯದ ಹೆಚ್ಚಳಕ್ಕೆ ಸಹ ಅನುಮತಿ ನೀಡಲಾಗುತ್ತಿದೆ.

ಮೈಸೂರಿನ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿ ಕೆ.ಐ.ಎ.ಡಿ.ಬಿ. ವಶಪಡಿಸಿಕೊಂಡ ಜಮೀನಿನಲ್ಲಿ ವಸತಿ ಕಟ್ಟಡ ನಿರ್ಮಾಣ

4611 (5369) : ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರಿನ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿ ಕೆ.ಐ.ಎ.ಡಿ.ಬಿ. ವಶಪಡಿಸಿಕೊಂಡು ಜಮೀನಿನ ಪ್ರಮಾಣ ಎಷ್ಟು ಅದನ್ನು ಎಷ್ಟು ಮಂದಿ ಕೈಗಾರಿಕೋದ್ಯಮಿಗಳಿಗೆ ಹಂಚಲಾಗಿದೆ.

ಆ) ಕೈಗಾರಿಕೆಗೆ ನಿಗದಿಪಡಿಸಿದ ಜಮೀನಿನಲ್ಲಿ ವಸತಿ ಕಟ್ಟಡಗಳನ್ನು ಕಟ್ಟಿಕೊಳ್ಳುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ;

ಇ) ಈ ರೀತಿ ಕಾನೂನಿನ ವಿರುದ್ಧ ಕಟ್ಟಡ ನಿರ್ಮಾಣಕ್ಕೆ ಕಾರಣರಾದ ಅಧಿಕಾರಿಗಳು ಯಾರು.

ಈ) ಅವರುಗಳ ವಿರುದ್ಧ ಏನು ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಮೈಸೂರಿನ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ವಶಪಡಿಸಿಕೊಂಡ ಜಮೀನಿನ ವಿಸ್ತೀರ್ಣ 1603 ಎಕರೆ ಭೂಸ್ವಾಧೀನ ಪಡಿಸಿ ಜಮೀನನ್ನು ಅಭಿವೃದ್ಧಿಪಡಿಸಿ 477 ಕೈಗಾರಿಕೆಗಳಿಗೆ ಯೋಜನೆಯನ್ನು ಕಾರ್ಯಗತಗೊಳಿಸಲು ಹಂಚಿಕೆ ಮಾಡಲಾಗಿದೆ.

ಆ) ಕೈಗಾರಿಕೆಗೆ ನಿಗದಿಪಡಿಸಿದ ಜಮೀನಿನಲ್ಲಿ ವಸತಿ ಕಟ್ಟಡಗಳನ್ನು ಕಟ್ಟಿರುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಸಮಾಜ ಕಲ್ಯಾಣ ಇಲಾಖೆಯಲ್ಲಿ ಬ್ಯಾಕ್‌ಲಾಗ್ ಹುದ್ದೆಗಳು

4641 (5362) : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಮಾಜ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇದ್ದ ಬ್ಯಾಕ್ ಲಾಗ್ ಹುದ್ದೆಗಳ ಸಂಖ್ಯೆ ಎಷ್ಟು? ವರ್ಷವಾರು ತಿಳಿಸುವುದು:

ಆ) ಅವುಗಳ ಪೈಕಿ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ.

ಇ) ಇನ್ನೂ ಭರ್ತಿ ಮಾಡಬೇಕಾದ ಹುದ್ದೆಗಳ ಸಂಖ್ಯೆ ಎಷ್ಟು ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಸಮಾಜ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇದ್ದ ಪ.ಜಾ/ಪ.ವರ್ಗದ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆಯ ವಿವರ.

ಕ್ರ.ಸಂ.	ಹುದ್ದೆ	ಪ.ಜಾತಿ	ಪ.ವರ್ಗ	ಒಟ್ಟು
1.	ಸೀನಿಯರ್ ವಾರ್ಡನ್	01	01	02
2.	ವಿದ್ಯಾರ್ಥಿನಿಲಯ ಮೇಲ್ವಿಚಾರಕರು	05	01	06
3.	ಬೆರಳಚ್ಚುಗಾರರು	02	01	03
4.	ವಾಹನ ಚಾಲಕರು	01	–	01
	ಒಟ್ಟು	09	03	12

ಆ) 12 ಬ್ಯಾಕ್ ಲಾಗ್ ಹುದ್ದೆಗಳನ್ನು ಈಗಾಗಲೇ ನಿಯಮಾನುಸಾರ ಭರ್ತಿ ಮಾಡಿ ನೇಮಕಾತಿ ಆದೇಶಗಳನ್ನು ನೀಡಲಾಗಿದೆ.

ಇ) ಅನ್ವಯಿಸುವುದಿಲ್ಲ.

ರಾಜ್ಯದಲ್ಲಿರುವ ಸಹಕಾರಿ ಸಂಸ್ಥೆಗಳಲ್ಲಿನ ಸಾಲ ವಸೂಲಾತಿ

4932 : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?